12

# ಸಿದ್ಧತೆಯ ಬೆಲೆ

## (ಯೋಹಾನ 16)

*"ನೀವು ಧೈರ್ಯಗೆಟ್ಟು ಹಿಂಜರಿಯಬಾರದೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಿಮಗೆ ಬಹಿಷ್ಕಾರ ಹಾಕುವರು; ಅದಲ್ಲದೆ ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಸುವ ಕಾಲ ಬರುತ್ತದೆ. ಅವರು ತಂದೆಯನ್ನಾದರೂ ನನ್ನನ್ನಾದರೂ ತಿಳಿಯದವರಾಗಿರುವದರಿಂದ ಇಂಥದನ್ನು ನಿಮಗೆ ಮಾಡುವರು. ಆ ಕಾಲ ಬಂದಾಗ ಆತನು ನಮಗೆ ಇಂಥಿಂಥದನ್ನು ಹೇಳಿದನಲ್ಲಾ ಎಂದು ನೀವು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ.*

*ನಾನು ನಿಮ್ಮ ಸಂಗಡ ಇದ್ದದರಿಂದ ಮೊದಲು ಇವುಗಳನ್ನು ನಿಮಗೆ ಹೇಳಲಿಲ್ಲ. ಆದರೆ ಈಗ ನಾನು ನನ್ನನ್ನು ಕಳುಹಿಸಿಕೊಟ್ಟಾತನ ಬಳಿಗೆ ಹೋಗುತ್ತೇನೆ. ನೀನು ಎಲ್ಲಿಗೆ ಹೋಗುತ್ತೀ ಎಂದು ನಿಮ್ಮಲ್ಲಿ ಒಬ್ಬನಾದರೂ ನನ್ನನ್ನು ಕೇಳು ವದಿಲ್ಲ; ಆದರೆ ನಾನು ಈ ಮಾತುಗಳನ್ನು ನಿಮಗೆ ಹೇಳಿದ್ದರಿಂದ ನಿಮ್ಮ ಹೃದಯವು ದುಃಖದಿಂದ ತುಂಬಿಯದೆ. ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಕೇಳಿರಿ; ನಾನು ಹೋಗುವದು ನಿಮಗೆ ಹಿತಕರವಾಗಿದೆ; ಹೇಗಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿ ಕೊಡುತ್ತೇನೆ" (ವಚನಗಳು 1-7).*

ಅಪೊಸ್ತಲರಿಗೆ ಮುಂದೆ ಬರಲಿದ್ದ ಅನಿಶ್ಚಯವಾದ ಭವಿಷ್ಯವನ್ನು ಎದುರಿಸುವ ಸಲುವಾಗಿ ಯೇಸು ಮೇಲುಪ್ಪರಿಗೆಯಲ್ಲಿ ಅವರನ್ನು ಸಿದ್ಧಗೊಳಿಸಿದನು. ಈ ದಿವಸಗ ಳಲ್ಲಿ ಹೇಳುವಂತೆ: "ಮುನ್ನೆಚರಿಕೆಗಾಗಿ, ಆಯುಧಗಳನ್ನು ಧರಿಸಬೇಕು." ಮರುದಿನದಲ್ಲಿ ಅಪೊಸ್ತಲರು ಒಂದು ಪರೀಕ್ಷೆಯನ್ನು ಎದುರಿಸಬೇಕಿತ್ತು, ಅಷ್ಟೆ ಅಲ್ಲದೆ ಮುಂದಿನ ಅನೇಕ ವರ್ಷಗಳನ್ನು ಅವರು ಇದೇ ರೀತಿ ಎದುರಿಸಬೇಕಿತ್ತು. ಆದ್ದರಿಂದ ಅವರಿಗೆ ತಕ್ಷಣದ ಹಾಗೂ ನಿತ್ಯವಾದ ಉತ್ತೇಜನದ ಅಗತ್ಯತೆಯಿತ್ತು. ಯೇಸುವಿನ ಮರಣ ಪುನರುತ್ಥಾನವು ಲೋಕವನ್ನು ಬದಲಿಸಿ, ಅಪೊಸ್ತಲರಿಗೆ ವಿಶೇಷವಾದ ಪಾತ್ರವನ್ನು ನೀಡುವದತ್ತಿತ್ತು. ಈ ಸಂಗತಿಗಳು ನೆರವೇರುವಾಗ, ಸೈತಾನನು ಕ್ರೈಸ್ತತ್ವವನ್ನು ನಿರ್ನಾಮ ಮಾಡಲು ಯತ್ನಿಸಿದನು (ಪ್ರಕಟನೆ 12:17). ಅಪೊಸ್ತಲರು ಅರಿಯಲಾರದ ವಿಶೇಷವಾದ ನಾಯಕತ್ವವನ್ನು ಈ ಸಮಯದಲ್ಲಿ ಪಡೆಯಬೇಕಾಯಿತು.

ಹೌದು ಯೇಸುವಿನ ಈ ಮಾತುಗಳಲ್ಲಿ ಸಮಯಾಲೋಚನೆಯಾಗಲೀ ಇರದೆ ಗೊಂದಲಮಯವಾಗಿತ್ತು. ಈ ಸತ್ಯದ ಹೊರತಾಗಿಯೂ, ಮುಂದೆ ಬರಲಿರುವ ಅನಿಶ್ಚಯವಾದ ಭವಿಷ್ಯತ್ತಿಗಾಗಿ ಯೇಸು ಅವರನ್ನು ಸಿದ್ಧಪಡಿಸುತ್ತಿದ್ದನು. ಆತನು ಅವರನ್ನು ಬಿಟ್ಟು ತಂದೆಯ ಬಳಿಗೆ ಹೊರಟು ಹೋಗುವ ವಿಚಾರವು ಇದ್ದಾಗ್ಯೂ, ಆತನು ಅವರೊಂದಿಗೆ ಮಾಡಿದ ಚರ್ಚೆ ಅಗತ್ಯವಾಗಿತ್ತು.

ಈ ವಿಚಾರದ ನಿಮಿತ್ತ ಅವರಲ್ಲಿ ಸಿದ್ಧತೆಯು ಪ್ರಮುಖ ಅಂಶವಾಯಿತು. ಆದ್ದರಿಂದ, ಯಾವುದೇ ಕ್ರೈಸ್ತನು ಕಾರ್ಗತ್ತಲನು ಎದುರಿಸದೇ ಭವಿಷ್ಯವನ್ನು ಬಯಸುವದು ಅಸಾಧ್ಯವಾಗಿತ್ತು. ಆತನ ಮಾತಿನ ಹಿನ್ನೆಲೆಯಲ್ಲಿ, ನಂಬಿಕೆಯಿಂದ ಸಿದ್ಧರಾಗಬೇಕು ಏಕೆ ಎಂದು ಚಿಂತನೆ ಮಾಡೋಣ.

## ಹೆಚ್ಚಿನ ಬಲ

*ಮುಂದೆ ಬರುವದಕ್ಕಿರುವ ಕಷ್ಟದ ದಿನಗಳನ್ನು ನಾವುಗಳು ಸಹ ಎದುರಿಸುವದಕ್ಕೆ ಹೆಚ್ಚಿನ ಬಲ ಹೊಂದಿ ಸಿದ್ಧಗೊಳ್ಳಬೇಕಿತ್ತು.* ಅಪೊಸ್ತಲರು ಸಹ ತಮಗೆ ಉಂಟಾಗಲಿದ್ದ ವಿಚಾರಣೆಯ ಸಮಯದಲ್ಲಿ ಅಧೈರ್ಯಗೊಳ್ಳದಂತೆ, ಯೇಸು ಈ ಮಾತುಗಳನ್ನು ಅವರಿಗೆ ಮುಂದಾಗಿ ತಿಳಿಸಿದ್ದನು.

> "ನೀವು ಧೈರ್ಯಗೆಟ್ಟು ಹಿಂಜರಿಯಬಾರದೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಿಮಗೆ ಬಹಿಷ್ಕಾರ ಹಾಕುವರು; ಅದಲ್ಲದೆ ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಸುವ ಕಾಲ ಬರುತ್ತದೆ" (16:1-3).

ಮುಂದೆ ಅವರಿಗೆ ಬರಲಿದ್ದ ಹಿಂಸೆಯನ್ನು ಅಂದರೆ, ಸ್ವಂತದವರಿಂದ ಅವಮಾನ ಅಥವಾ ತಪ್ಪುದಾರಿಯಲ್ಲಿದ್ದ ಜನರಿಂದ ಮರಣ ಅಂಥವುಗಳಿಂದ ಅವರುಗಳು ಎಡವಿಬೀಳದಂತೆ, ಯೇಸುವಿನ ಮಾತುಗಳು ಅವರನ್ನು ತಡೆಯಲು ಸಾಧ್ಯವಿತ್ತು. "ಎಡವು" ಅಂದರೆ (ಸ್ಕಾಂಡ್‌ಲೈಜ್), ಮತ್ತೊಬ್ಬನ ಕೋಪವನ್ನು ಅನುಭವಿಸುವಂತೆ ಮಾಡುವುದು ಅಥವಾ ಅವನನ್ನು ದಿಗ್ಭ್ರಮೆಗೊಳಿಸುವದು ಎಂಬ ಅರ್ಥವಾಗಿದೆ. 6:61ರಲ್ಲಿ ಇದೇ ಪದವನ್ನು ಬಳಸಲಾಗಿದೆ. ಯೋಹಾನನು, ಬರೆದಿ "ಯೇಸು ತನ್ನ ಶಿಷ್ಯರು ಇದಕ್ಕೆ ಗುಣಗುಟ್ಟುತ್ತಾರೆಂದು ತನ್ನಲ್ಲಿ ತಿಳುಕೊಂಡು ಅವರಿಗೆ, ಈ ಮಾತಿನಿಂದ ನಿಮಗೆ *ಬೇಸರವಾಯಿತೋ?*" (ಒತ್ತಿ ಹೇಳಿದ್ದು ನನ್ನದು.)

ಅಪೊಸ್ತಲರು ಹಿಂಸೆಗಳನ್ನು ಅನುಭವಿಸುವಾಗ, ಅವರುಗಳು ಎಡವಿಬೀಳದಂತೆ ಯೇಸು ಅವರಿಗೆ ಅಗತ್ಯವಾದ ಮಾಹಿತಿಯನ್ನು ನೀಡಿದ್ದನು. ಅವರು ತಮ್ಮ ಕಷ್ಟಗಳನ್ನು ಅವರ ಭವಿಷ್ಯದ ಒಂದು ಭಾಗ, ಮತ್ತು ಇದನ್ನು ಯೇಸು ಅವರಿಗಾಗಿ ನಿರ್ಮಾಣಮಾಡಿದ್ದನು ಎಂದು ತಿಳಿಯಬೇಕಿತ್ತು.

ಈ ಸತ್ಯವು ನಮಗೂ ಅನ್ವಯಿಸುತ್ತದೆ. 2 ತಿಮೊಥೆ 3:12 ರಂತೆ ಪ್ರತಿಯೊಬ್ಬ ಕ್ರೈಸ್ತನು ಈ ವಿಧವಾಗಿ ಹಿಂಸೆಯೆಂಬ ಯುದ್ಧವನ್ನು ಹೊರಾಡಲೇಬೇಕು. ನಾವು ಹಿಂಸೆಯನ್ನು ಎದುರಿಸುವಾಗ ಬೇಸರಗೊಳ್ಳಬಾರದು, ಯಾಕಂದರೆ ಅವುಗಳು ಸಂಭವಿಸುತ್ತವೆ ಎಂಬ ವಾಕ್ಯಗಳು ಈಗಾಗಲೇ ಮುನ್ನೆಚ್ಚರಿಕೆ ನೀಡಿದೆ, ನಾವು ಧ್ಯಾನಿಸುತ್ತಿರುವ ಈ ವಾಕ್ಯವು ನಾವು ಬೇಸರ ಪಡಬಾರದು ಹಾಗೂ ಬಲವನ್ನು ಹೊಂದಿ ಮುಂದೆ ಸಾಗಬೇಕೆಂದು ತಿಳಿಸುತ್ತದೆ.

## ನೆನಪಿಸುವದು

*ಎರಡನೆಯದಾಗಿ, ಈ ಹಿಂಸೆ ನಾವು ಅನುಭವಿಸಿರುವ ಆಶೀರ್ವಾದಗಳನ್ನು ನಮಗೆ ನೆನಪಿಸಿ, ನಾವುಗಳು ಸಿದ್ಧರಾಗುವಂತೆ ಮಾಡುತ್ತದೆ.* ಹೌದು ಒಂದು ದಿನ ಕಷ್ಟವು ಅವರಿಗೆ ಎದುರಾಗುತ್ತದೆ, ಆದರೆ ಆತನು ಲೋಕದಲ್ಲಿರುವಾಗ ಸಂರಕ್ಷಣೆಯ ಕುರಿತು ತಿಳಿಸಿದ್ದ ಮಾತುಗಳನ್ನು ಅವರಿಗೆ ನೆನಪು ಮಾಡುತ್ತಿತ್ತು.

> ಆ ಕಾಲ ಬಂದಾಗ ಆತನು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ.
>
> ನಾನು ನಿಮ್ಮ ಸಂಗಡ ಇದ್ದದರಿಂದ ಮೊದಲು ಇವುಗಳನ್ನು ನಿಮಗೆ ಹೇಳಲಿಲ್ಲ. ಆದರೆ ಈಗ ನಾನು ನನ್ನನ್ನು ಕಳುಹಿಸಿಕೊಟ್ಟಾತನ ಬಳಿಗೆ ಹೋಗುತ್ತೇನೆ. ನೀನು ಎಲ್ಲಿಗೆ ಹೋಗುತ್ತೀ ಎಂದು ನಿಮ್ಮಲ್ಲಿ ಒಬ್ಬನಾದರೂ ನನ್ನನ್ನು ಕೇಳುವದಿಲ್ಲ; ಆದರೆ ನಾನು ಈ ಮಾತುಗಳನ್ನು ನಿಮಗೆ ಹೇಳಿದ್ದರಿಂದ ನಿಮ್ಮ ಹೃದಯವು ದುಃಖದಿಂದ ತುಂಬಿಯದೆ (16:4-6).

ಯೇಸುವಿಗೂ ಹಾಗೂ ಆತನ ಶಿಷ್ಯರಿಗೂ ಮುಂದೆ ಸಂಭವಿಸಬಹುದಾದ ವಿಚಾರಗಳನ್ನು ತಿಳಿದುಕೊಂಡು, ಯೇಸು ತನ್ನ ಮರಣದವರೆಗೂ ಕಾಯುತ್ತಿದ್ದದನ್ನು ಅಪೊಸ್ತಲರು ನೆನಪಿಸಿಕೊಂಡರು. ಈ ಸಮಯದವರೆಗೂ ಆತನು ಅವರನ್ನು ಸಂರಕ್ಷಿಸಿ ಕಾಪಾಡಿಸಿದ್ದನು. ಆತನು ಅವರನ್ನು ಅಪೊಸ್ತಲರನ್ನಾಗಿ ಸಿದ್ಧಮಾಡಬೇಕೆಂಬ ಬಯಕೆಯಿಂದ, ಅವರುಗಳು ಯಾವದೇ ವಿಚಾರದಲ್ಲಿ ಬೇಸರಪಟ್ಟುಕೊಳ್ಳಬಾರದು ಎಂದು ಸಿದ್ಧಪಡಿಸುತ್ತಿದ್ದನು. ನಂತರದಲ್ಲಿ ಅವರು ಕಷ್ಟಗಳಿಗೆ ಸಿಲುಕಿದಾಗ, ಆತನು ಅವರೊಂದಿಗೆ ಧೈಹೀಕವಾಗಿರುವಾಗ ನೀಡಿದ ಸಂರಕ್ಷಣೆಯನ್ನು ಅವರು ನೆನಪಿಸಬೇಕಿತ್ತು.

ಭವಿಷ್ಯಕ್ಕಾಗಿ ಅನುಕೂಲಕರವಾದ ಸಿದ್ಧತೆಯು ತೀರಿದ ನಂತರ, ಹಿಂದೆ ಉಂಟಾಗಿದ್ದ ಕಾರ್ಯವನ್ನು ನೆನಪುಮಾಡಿ ಆನಂದಗೊಳ್ಳಬಹುದು. ನಾವುಗಳು ಸಿದ್ಧಗೊಂಡ ವಿಚಾರವನ್ನು ಅರಿಯುವಾಗ ಅಥವಾ ಮುಂದಿನ ಒಳತಿಗಾಗಿ ಉತ್ತಮವಾದ ಯೋಜನೆಯನ್ನು ಮಾಡಬಹುದು. ಇದರಿಂದ ನಮ್ಮ ಆತ್ಮಗಳಿಗೆ ಆಶೀರ್ವಾದ ಉಂಟಾಗುತ್ತದೆ.

ಕ್ರಿಸ್ತನ ಈ ಮಾತುಗಳನ್ನು ಕಲಿಯುವಾಗ ಕಷ್ಟಕರವಾದ ಭವಿಷ್ಯವನ್ನು ಎದುರಿಸುವಾಗ "ಒಬ್ಬನು ತನ್ನ ಹಿಂದಿನ ಆಶೀರ್ವಾದದಾಯಕ ಕೃಪೆಯ ಸಂಗತಿಗಳನ್ನು ನೆನಪಿಸುವಾಗ ಅದರಿಂದ ಅವನು ಧನ್ಯನಾಗುವನು." ನನ್ನ ತಂದೆಯು ರೋಗದ ನಿಮಿತ್ತವಾಗಿ ಇನ್ನು ಜೀವಿಸುವದು ಅಸಾಧ್ಯ ಎಂದು ತಿಳಿದಾಗ, ನನಗೆ, "ನಾನು ಒಂದು ಉತ್ತಮವಾದ ಜೀವಿತವನ್ನು ಜೀವಿಸಿದೆ, ನಾನು ಆನಂದಿಸಿದ ಸಂಗತಿಗಳಿಗಾಗಿ ಕೃತಾರ್ಥನಾಗಿದ್ದೇನೆ" ಎಂದು ಹೇಳಿದರು. ಅವರು ತಮ್ಮ ಕಳೆದ ಜೀವಿತದಲ್ಲಾದ ಸಂಗತಿಗಳನ್ನು ನೆನಪುಮಾಡಿದಾಗ, ಅವರಿಗೆ ಬಲ ಹಾಗೂ ಸಂತೈಸುವಿಕೆ ಉಂಟಾಯಿತು. ಅಪೊಸ್ತಲರು ಈ ವಿಚಾರದಿಂದ ಹೊರತಾಗಿರಲಿಲ್ಲ. ಅವರಿಗೆ ಉಂಟಾದ ಅತಿ ಹಿಂಸೆಯ ಸಮಯದಲ್ಲಿ, ಕ್ರಿಸ್ತನ ಕೃಪೆಯನ್ನು ನೆನಪಿಸಿದಾಗ ಅವರು ಸಹ ಕೃತಾರ್ಥರಾದರು.

## ಸಜ್ಜಾಗಿರಿ/ಸಿದ್ಧರಾಗಿ

*ಮೂರನೆಯದಾಗಿ ಸಕಲ ವಿಚಾರದಲ್ಲಿ ತಯಾರುಗೊಂಡಾಗ, ಮುಂದೆ ಬರಲಿದ್ದ ಉತ್ತಮ ಸಂಗತಿಗಳನ್ನು ಸ್ವೀಕರಿಸಲು ಸಜ್ಜಾಗಬೇಕು.* ಅವರು ಪವಿತ್ರಾತ್ಮನನ್ನು ಸ್ವೀಕರಿಸಬೇಕಿದ್ದರೆ ತಾನು ತಂದೆಯ ಬಳಿಗೆ ಹಿಂದಿರುಗಬೇಕು ಎಂದು ಯೇಸು ತಿಳಿಸಿದನು, "ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಕೇಳಿರಿ; ನಾನು ಹೋಗುವದು ನಿಮಗೆ ಹಿತಕರವಾಗಿದೆ; ಹೇಗಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿ ಕೊಡುತ್ತೇನೆ" (16:7).

ಯೇಸು ಅಪೊಸ್ತಲರಿಗಾಗಿ ತಂದೆಯ ಯೋಜನೆಯನ್ನು ನೀಡಿದನು. ಅದು ಮಹಿಮೆಯುಳ್ಳ ಹಾಗೂ ನಿತ್ಯವಾಗಿರುವಂತಹ ಯೋಜನೆಯಾಗಿತ್ತು. ಹೌದು ನೋವು ಸಂಕಟಗಳು ಮುಂದೆ ಬರಲಿದ್ದವು. ಅವರ ಭವಿಷ್ಯವು ವ್ಯತ್ಯಾಸವುಳ್ಳ ಜೀವನ ಹಾಗೂ ಹಂಗುಗಳಿಗೆ ಒಳಪಡುವದಿದ್ದರೂ, ಪವಿತ್ರಾತ್ಮನು ಎಂಬ ದೊಡ್ಡ ಸಹಾಯಕನು ಅವರಿಗಾಗಿ ಇದ್ದನು.

ದೇವರು ಯಾವಾಗಲು ಮುಂದಾಗಿ ಹೋಗುವವನು ಎಂದು ನಾವು ಅರಿಯಬೇಕು. ಆತನು ಕೇವಲ ನಾವು ಎಲ್ಲಿ ಹೋಗಬೇಕು, ಏನು ಮಾಡಬೇಕೆಂದು ತಿಳಿಸದೆ, ನಾವು ಎಲ್ಲಿ ಹೋಗಿ, ಏನನ್ನು ಮಾಡಬೇಕೆಂಬ ಯೋಜನೆಗಳನ್ನು ಸಹ ರೂಪಿಸುತ್ತಾನೆ. ನಾವು ನಾಳೆಯನ್ನು ಸೇರುವಾಗ, ದೇವರು ಮುಂದಾಗಿ ಹೋಗಿ, ನಮ್ಮನ್ನು ಆಹ್ವಾನಿಸುವ ತಯಾರನ್ನು ನಡಿಸಿ, ನಾವು ಮಾಡಬೇಕಾದ ಕಾರ್ಯಗಳಿಗೆ ನಮಗೆ ಸಹಾಯಿಸುತ್ತಾನೆ ಆತನು ನಮ್ಮನ್ನು ಕೇವಲ ಕೆಲವು ಸಂಧಿಗ್ಧ ಪರಿಸ್ಥಿತಿಗಳಿಗಾಗಿ ಮಾತ್ರ ಸಿದ್ಧ ಮಾಡದೆ, ಆತನು ಪರಿಸ್ಥಿತಿಗಳನ್ನು ಸಹ ನಮಗಾಗಿ ಸಿದ್ಧಪಡಿಸುತ್ತಾನೆ.

ಅಪೊಸ್ತಲರು ಮಹಾ ಗೊಂದಲಕ್ಕೆ ಒಳಗಾಗಿರುವಾಗ, ಯೇಸು ಅವರ ಹೃದಯದಲ್ಲಿ ಪವಿತ್ರಾತ್ಮನನ್ನು ನೀಡಿ ಅವರನ್ನು ಸಂತೋಷಪಡಿಸಿದನು. ಆತ್ಮನ ಬಲವು ಅವರಿಗೆ ಅವರು ಈ ಹಿಂದೆ ಕಲಿತಿದ್ದ ವಿಷಯಗಳನ್ನು ನೆನಪುಮಾಡಿ, ಅವರು ಉಪದೇಶಿಸ ಬೇಕಾಗಿದ್ದ ಸತ್ಯಗಳನ್ನು ಅವರಿಗೆ ನೆನಪುಮಾಡಿದನು (14:26). ಅಪೊಸ್ತಲರಿಗೆ ಉಂಟಾದ ಈ ವಾಗ್ದಾನಗಳು ನಮಗೂ ಸಮರ್ಪಕವಾಗುವದಿಲ್ಲವೇ. ನಾಳೆಯ ಕುರಿತು ನಾವುಗಳು ಏಕೆ ಚಿಂತಿಸಬೇಕು? ಹೌದು ದೇವರು ತಾನೇ ನಮ್ಮೊಂದಿಗೆ ನಡೆಯುತ್ತಾನೆ, ಆತನು ಮುಂದಾಗಿ ಹೋಗಿ ನಮ್ಮ ಕೆಲಸಗಳನ್ನು ಸಜ್ಜು ಮಾಡುತ್ತಾನೆ, ತನ್ನ ಸೇವೆಯನ್ನು ನಮ್ಮಲ್ಲಿ ನೆರವೇರಿಸಲು ಕಾಯುತ್ತಿರುತ್ತಾನೆ!

## ಮುಕ್ತಾಯ

ಕ್ರೈಸ್ತತ್ವವನ್ನು ವೃದ್ಧಿಪಡಿಸುವದಕ್ಕಾಗಿ, ಪರಿಪೂರ್ಣ ನಾಯಕನಾದ ಯೇಸು ತನ್ನ ಅಪೊಸ್ತಲರನ್ನು ಸಜ್ಜುಗೊಳಿಸಿದನು. ಯೇಸು ಕ್ರಿಸ್ತನು ಹೊರಟು ಹೋದ ನಂತರದ ದಿನಗಳು ಹೇಗಿದ್ದವು ಎಂದು ವರ್ಣಿಸುವದು ಕಷ್ಟವಾಗುತ್ತದೆ. ಹಳೇ ಹೇಳಿಕೆಯ ಪ್ರಕಾರ (ಯೂದನ ಬದಲಿಗೆ ಮತ್ತಿಯನು) ಹನ್ನೊಂದು ಜನ ಅಪೊಸ್ತಲರು ಭಯಾನಕ ಮರಣವನ್ನು ಅನುಭವಿಸಿದ್ದಾರೆ. ನಾವು ಪ್ರತಿನಿಧಿಸಿರುವ ಯೋಹಾನನು ವೃದ್ಧನಾಗಿ, ಹೇಳಿದ್ದೇನೆಂದರೆ, "ನಿಮ್ಮ ಸಹೋದರನೂ ಯೇಸುವಿನ ನಿಮಿತ್ತ ಹಿಂಸೆಯಲ್ಲಿಯೂ ರಾಜ್ಯದಲ್ಲಿಯೂ ತಾಳ್ಮೆಯಲ್ಲಿಯೂ ನಿಮ್ಮೊಂದಿಗೆ ಪಾಲುಗಾರನೂ ಆಗಿರುವ ಯೋಹಾನನೆಂಬ ನಾನು ದೇವರ ವಾಕ್ಯಕ್ಕೋಸ್ಕರವೂ ಯೇಸುವಿನ ವಿಷಯವಾದ ಸಾಕ್ಷಿಗೋಸ್ಕರವೂ ಪತ್ಮೊಸ್ ದ್ವೀಪದಲ್ಲಿದ್ದೆನು" (ಪ್ರಕಟನೆ 1:9).

ಅಪೊಸ್ತಲರು ಮುಂದೆ ಅನುಭವಿಸಲಿಕ್ಕಿದ್ದ ಕಾರ್ಯಗಳಿಗಾಗಿ ಯೇಸು ಅವರನ್ನು ಯಾವ ರೀತಿ ಸಜ್ಜುಗೊಳಿಸಿದನು? ಎಡವಿ ಬೀಳದಂತೆ ಅವರನ್ನು ಬಲಪಡಿಸಿದನು, ಅವರು ನೆನಪುಮಾಡುವಂತೆ ಪ್ರೇರಿಸಿದನು, ಆತ್ಮದಲ್ಲಿ ಸೇವೆ ಸಲ್ಲಿಸುವಂತೆ ಮಾಡಿದನು. ಆತನ ಈ ಮಾತುಗಳಿಂದ ಪ್ರೇರಿತರಾಗಿ, ದೇವರು ನೇಮಿಸಿರುವ ಕಾರ್ಯಕ್ಕಾಗಿ ಸಿದ್ಧರಾಗೋಣ.

---

*"ಈಗಲೇ ಪಾನದ್ರವ್ಯವಾಗಿ ಅರ್ಪಿತನಾಗುತ್ತಾ ಇದ್ದೇನೆ; ನಾನು ಹೊರಟು ಹೋಗಬೇಕಾದ ಸಮಯವು ಸಮೀಪಕ್ಕೆ ಬಂದದೆ. ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ; ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು" (2 ತಿಮೊಥೆ 4:6-8).*